## ದಿನಾಂಕ:29-07-2010 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

**ವಿಷಯದ ಸಂಖ್ಯೆ: 7(63)/2010-11**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕೃಷ್ಣರಾಜಪುರ - ಬೆಂಗಳೂರು ಪೂರ್ವ ಮಧ್ಯೆ ಬರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಸಂಖ್ಯೆ 136 ಎ ಬೈಯ್ಯಪ್ಪನಹಳ್ಳಿ ಬಳಿ ರೈಲ್ವೆ ಮೇಲು ಸೇತುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ದಿನಾಂಕ:04-11-2008 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ, ಇವರು ಪಾಲಿಕೆ ಆಯುಕ್ತರಿಗೆ ಅರೆ ಸರ್ಕಾರಿ ಪತ್ರ ಬರೆದು, ಸದರಿ ಲೆವೆಲ್ ಕ್ರಾಸಿಂಗ್‌ಗೆ ಅಡ್ಡಲಾಗಿ ಮೇಲ್ಸೇತುವೆಯನ್ನು ನಿರ್ಮಾಣ ಮಾಡಲು ಬೇಕಾಗಿರುವ ರಕ್ಷಣಾ ಇಲಾಖೆಯ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಲು ತಿಳಿಸಿದ್ದರು. ನಾಲ್ಕು ಪಥಗಳ ಆರ್.ಓ.ಬಿ ನಿರ್ಮಾಣ ಮಾಡಲು ರಕ್ಷಣಾ ಇಲಾಖೆಗೆ ಸೇರಿದ 4706 ಚ.ಮೀ. ಭೂಮಿ ಬೇಕಾಗಿದ್ದು, ರಕ್ಷಣಾ ಇಲಾಖೆ ಹಾಗೂ ಸರ್ಕಾರದ ಜೊತೆ ಪತ್ರ ವ್ಯವಹಾರವನ್ನು ನಡೆಸಲಾಗಿದೆ. ರಕ್ಷಣಾ ಇಲಾಖೆಯಿಂದ ಪಡೆಯುವ ಭೂಮಿಗೆ ಪ್ರತಿಯಾಗಿ ಅಷ್ಟೇ ಮೊತ್ತದ ಸರ್ಕಾರಿ ಭೂಮಿಯನ್ನು ಕೊಡುವ ಬಗ್ಗೆ ದಿನಾಂಕ:03-06-2008 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ತೀರ್ಮಾನಿಸಲಾಯಿತು.

ಈ ಮಧ್ಯೆ ದಿನಾಂಕ: 06-08-2008ರಂದು ಪಾಲಿಕೆಯ ಮುಖ್ಯ ಅಭಿಯಂತರರು, ರೈಲ್ವೆ ಇಲಾಖೆಯ ಮುಖ್ಯ ಅಭಿಯಂತರರು ಮತ್ತು ಯೋಜನೆಯ ಸಲಹೆಗಾರರಾದ ಮೆ:ರೈಟ್ಸ್ ರವರು ಉದ್ದೇಶಿತ ಕಾಮಗಾರಿ ಸ್ಥಳವನ್ನು ತಪಾಸಣೆ ಮಾಡಿ 7 ಮೀ. ಅಗಲದ ಆರ್.ಓ.ಬಿ. ನಿರ್ಮಾಣ ಮಾಡಿದರೆ ರಕ್ಷಣಾ ಇಲಾಖೆಯ ಭೂಸ್ವಾಧೀನಪಡಿಸಿಕೊಳ್ಳುವ ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟಿದ್ದು, ಸದರಿ ವಿಷಯದ ಬಗ್ಗೆ ದಿನಾಂಕ:14-07-2008 ರಂದು ನಡೆದ Steering Committee ಯಲ್ಲಿ ಚರ್ಚಿಸಲಾಗಿ, ಚರ್ಚೆಯ ನಂತರ 7 ಮೀ ಅಗಲದ (2 ಪಥಗಳ) ಆರ್.ಓ.ಬಿ. ನಿರ್ಮಾಣದ ನಕ್ಷೆಯನ್ನು ತಯಾರಿಸಿ, ಕಾಮಗಾರಿ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು. ಅದರಂತೆ, ಮೆ: ರೈಟ್ಸ್‌ರವರು ತಯಾರಿಸಿ ಸಲ್ಲಿಸಿದ ಜಿ.ಎ.ಡಿ ಗೆ ದಿನಾಂಕ:16-10-2008 ರಂದು ಮಾನ್ಯ ಆಯುಕ್ತರವರಿಂದ ಅನುಮೋದನೆ ಪಡೆದು ನೈರುತ್ಯ ರೈಲ್ವೆ ಇಲಾಖೆರವರ ಅನುಮೋದನೆಗಾಗಿ ಸಲ್ಲಿಸಿದ್ದು, ರೈಲ್ವೆ ಇಲಾಖೆಯಲ್ಲಿ ಜಿ.ಎ.ಡಿಗೆ ಅನುಮೋದನೆ ದೊರೆತಿರುತ್ತದೆ.

ನೈರುತ್ಯ ರೈಲ್ವೆ ಇಲಾಖೆಯವರು ದಿನಾಂಕ:25-05-2010 ರಂದು ಕಾಮಗಾರಿ ಕೆಲಸಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಪಾಲಿಕೆಯ ಅನುಮೋದನೆಯನ್ನು ಕೋರಿರುತ್ತಾರೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

ಈ ಯೋಜನೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2009-10 ನೇ ಸಾಲಿನ ಆಯವ್ಯಯದಲ್ಲಿ ಸೇರಿದ್ದು, ರೂ.75.00 ಲಕ್ಷಗಳ ಅನುದಾನವು ಲಭ್ಯವಿರುತ್ತದೆ. ಸೇತುವೆ ನಿರ್ಮಾಣ, ಅಪ್ರೋಚ್ ರಸ್ತೆ ನಿರ್ಮಾಣ ಮತ್ತು ಯುಟಿಲಿಟಿ ಸ್ಥಳಾಂತರ ಇತ್ಯಾದಿಗಳನ್ನು ರೈಲ್ವೆ ನಿಯಮಗಳಿಗನುಗುಣವಾಗಿ ತಯಾರಿಸಿರುವ ಅಂದಾಜು ಪಟ್ಟಿಯ ಮೊತ್ತ ರೂ.20,42,31,266.00 ಗಳಿಗೆ

ಪಾಲಿಕೆಯ ಅನುಮೋದನೆಯನ್ನು ದೃಢೀಕರಿಸುವ ಸಲುವಾಗಿ ಮೇಲು ರುಜು ಮಾಡಿ ಕಳುಹಿಸಿಕೊಡಲು ಕೋರಿರುತ್ತಾರೆ. ಅಂದಾಜು ಪಟ್ಟಿಯನ್ನು ಪರಿಶೀಲಿಸಿದಾಗ, ಸಾರ್ವಜನಿಕ ಸಂಪರ್ಕಗಳ ಸ್ಥಳಾಂತರಕ್ಕೆ ಅಂದಾಜು ಪಟ್ಟಿಯಲ್ಲಿ ಅಳವಡಿಸಿರುವ ಮೊತ್ತವು ತೀರ ಕಡಿಮೆಯಾಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ರೂ.1,00,00,000.00 ಗಳ ಅನುದಾನವನ್ನು ಸೇರಿಸಿಕೊಳ್ಳಬಹುದಾಗಿದೆ. ಅಂದಾಜು ಪಟ್ಟಿಯಲ್ಲಿ ಯೋಜನೆಗೆ ಅಗತ್ಯವಾದ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲು ಅನುದಾನವನ್ನು ಸೇರಿಸಿಕೊಂಡಿರುವುದಿಲ್ಲ. ಆದಕಾರಣ, ಭೂಸ್ವಾಧೀನ ಪ್ರಕ್ರಿಯೆಯನ್ನು ಪಾಲಿಕೆಯ ವತಿಯಿಂದ ವಹಿಸಬೇಕಾಗಿರುವುದರಿಂದ ರೂ.2.00 ಕೋಟಿಗಳ ಪ್ರಾರಂಭಿಕ ಅನುದಾನವನ್ನು ಅಂದಾಜು ಪಟ್ಟಿಯಲ್ಲಿ ಸೇರಿಸಿಕೊಳ್ಳಲಾಗಿರುತ್ತದೆ ಹಾಗೂ ನಾಗರೀಕ ಸೌಲಭ್ಯಗಳ ಸ್ಥಳಾಂತರ ಇತ್ಯಾದಿ ಕೆಲಸಗಳಿಗೆ ರೂ.1.00 ಕೋಟಿಗಳನ್ನು ಸೇರಿಸಿಕೊಳ್ಳಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಘೋಶ್ವಾರೆ ಅಂದಾಜು ಪಟ್ಟಿಯನ್ನು ರೂ.23,52,50,000.00 ಗಳಿಗೆ ತಯಾರಿಸಿದ್ದು, ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| **ಭಾಗ – I** | | |
| 1 | ರೈಲ್ವೆ ಇಲಾಖೆಯ ಅಂದಾಜು ಮೊತ್ತ (ಮೇಲ್ಸೇತುವೆ ಹಾಗೂ ಅಪ್ರೋಚ್ ರಸ್ತೆಯ ನಿರ್ಮಾಣ ಕಾಮಗಾರಿಗೆ) | 20,42,31,266.00 |
| | ಒಟ್ಟು | **20,42,31,266.00** |
| **ಭಾಗ – II** | | |
| 1 | ಭೂಸ್ವಾಧೀನ ಪ್ರಕ್ರಿಯೆ ಮೊತ್ತ | 2,00,00,000.00 |
| 2 | ಬಾಕ್ಸ್ ಮತ್ತು ಅಪ್ರೋಚ್ ರಸ್ತೆಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಅಗತ್ಯವಿರುವ ಮೊತ್ತ | 10,00,000.00 |
| 3 | ನಾಗರೀಕ ಸೌಲಭ್ಯಗಳ ಸ್ಥಳಾಂತರಕ್ಕೆ ಅಗತ್ಯವಿರುವ ಮೊತ್ತ | 1,00,00,000.00 |
| 4 | ಸಾಧಿಲ್ವಾರು ಮತ್ತು ಇತರೆ ಮೊತ್ತ | 18,734.00 |
| | **ಒಟ್ಟು** | **3,10,18,734.00** |
| | **ಒಟ್ಟಾರೆ ಮೊತ್ತ** | **23,52,50,000.00** |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ;

1. ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.23,52,50,000.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಪಾಲಿಕೆ ವತಿಯಿಂದ ನಿರ್ವಹಿಸಬಹುದಾದ ಅಂದಾಜು ಪಟ್ಟಿಯ ಮೊತ್ತ ರೂ.3,10,18,734.00 ಗಳಿಗೆ ಆಡಳಿತಾತ್ಮಕ ಅನುಮೋದನೆ.
3. ಸದರಿ ಯೋಜನೆಯ ಪ್ರಸ್ತಾವನೆಯನ್ನು ಆಡಳಿತಾತ್ಮಕ ಮಂಜೂರಾತಿಗಾಗಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ.

4. ಸದರಿ ಯೋಜನೆಗೆ ಘನ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ, ಅಂದಾಜು ಪಟ್ಟಿಗೆ ಮೇಲು ರುಜು ಮಾಡಿ ನೈರುತ್ಯ ರೈಲ್ವೆಗೆ ಸಲ್ಲಿಸಲು ಅನುಮೋದನೆ ಹಾಗೂ ರೈಲ್ವೆ ವತಿಯಿಂದ ಟೆಂಡರ್ ಆಹ್ವಾನ ಮಾಡಲು ಕೋರುವ ಬಗ್ಗೆ ಅನುಮೋದನೆ.

ಮೇಲ್ಕಂಡ ನಾಲ್ಕು (4) ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-07-2010 ರ ಟಿಪ್ಪಣಿ.

ಶ್ರೀ.ಬಿ.ಎಸ್.ಸತ್ಯನಾರಾಯಣ, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-07-2010 ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ.ಸಿ.ಕೆ.ರಾಮಮೂರ್ತಿರವರು ಶ್ರೀ.ಬಿ.ಎಸ್.ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:26-07-2010 ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

ಎಸ್.ಕೆ.ನಟರಾಜ

**(ಎಸ್.ಕೆ.ನಟರಾಜ)**
ಮಹಾಪೌರರು